# ಛಲಮನೆ ಮೆರೆವೆಂ – ರನ್ನ

## ಕವಿ – ಕಾವ್ಯ ಪರಿಚಯ




ಕನ್ನಡದ ರತ್ನತ್ರಯರಲ್ಲಿ ಒಬ್ಬನಾದ ರನ್ನನು ಕ್ರಿ. ಶ. ಸುಮಾರು 949 ರಲ್ಲಿ ಬಾಗಲಕೋಟೆ ಜಿಲ್ಲೆಯ ಮುದುವೊಳಲು ಎಂಬ ಗ್ರಾಮದಲ್ಲಿ ಜನಿಸಿದನು. ತಂದೆ ಜಿನವಲ್ಲಭ, ತಾಯಿ ಅಬ್ಬಲಬ್ಬೆ.ಈತನು 'ಸಾಹಸ ಭೀಮ ವಿಜಯಂ (ಗದಾಯುದ್ಧ)', 'ಅಜಿತತೀರ್ಥಂಕರ ಪುರಾಣತಿಲಕಂ', 'ಪರಶುರಾಮಚರಿತಂ', 'ಚಕ್ರೇಶ್ವರಚರಿತಂ' ಎಂಬ ಕಾವ್ಯಗಳನ್ನು ಬರೆದಿದ್ದಾನೆ. 'ರನ್ನಕಂದ' ಎಂಬ ನಿಘಂಟನ್ನು ಬರೆದಿರುವುದಾಗಿ ತಿಳಿದುಬರುತ್ತದೆ. ರನ್ನನು ಚಾಲುಕ್ಯ ದೊರೆ ತೈಲಪನ ಆಸ್ಥಾನದಲ್ಲಿದ್ದು ಆತನಿಂದ 'ಕವಿಚಕ್ರವರ್ತಿ' ಎಂಬ ಬಿರುದನ್ನು ಪಡೆದಿದ್ದಾನೆ.

## ಪದ್ಯದ ಆಶಯ ಭಾವ

ಧರ್ಮರಾಯನ ಮಯನಿರ್ಮಿತ ಅರಮನೆಯಲ್ಲಿ ಅವಮಾನಿತನಾದ ಕೌರವನು ಧರ್ಮರಾಯನನ್ನು ದ್ಯೂತಕ್ಕೆ ಆಹ್ವಾನಿಸಿ ಜೂಜಾಟದಲ್ಲಿ ಸೋಲಿಸುತ್ತಾನೆ. ದ್ಯೂತದ ಪಣದಂತೆ ಹನ್ನೆರಡು ವರ್ಷ ವನವಾಸ ಒಂದು ವರ್ಷ ಅಜ್ಞಾತವಾಸವನ್ನು ಯಶಸ್ವಿಯಾಗಿ ಮುಗಿಸಿಬಂದ ಪಾಂಡವರು ತಮ್ಮ ಪಾಲಿನ ರಾಜ್ಯವನ್ನು ಕೇಳುತ್ತಾರೆ. ಅಜ್ಞಾತವಾಸವು ಪೂರ್ಣವಾಗಿಲ್ಲ ಎಂಬ ನೆಪವನ್ನೊಡ್ಡಿ ಕೌರವನು ರಾಜ್ಯ ನೀಡಲು ನಿರಾಕರಿಸುತ್ತಾನೆ. ಸಂಧಾನದ ಮುಖೇನ ರಾಜ್ಯವನ್ನು ಮರಳಿ ಪಡೆಯುವ ಪ್ರಯತ್ನದಲ್ಲಿ ಧರ್ಮರಾಯ ಕೃಷ್ಣನನ್ನು ಸಂಧಿಗಾಗಿ

ಕಳುಹಿಸುತ್ತಾನೆ. ಕಪಟನಾಟಕ ಸೂತ್ರಧಾರಿಯಾದ ಶ್ರೀಕೃಷ್ಣ ಸಂಧಿಯ ನೆಪದಲ್ಲಿ ದುರ್ಯೋಧನನ ಬಲವನ್ನು ಕುಗ್ಗಿಸುವ ಸಲುವಾಗಿ ಮೊದಲು ವಿದುರನಲ್ಲಿಗೆ ಬರುತ್ತಾನೆ. ಇದರಿಂದ ಕುಪಿತನಾದ ಕೌರವ ವಿದುರನನ್ನು ತುಂಬಿದ ಸಭೆಯಲ್ಲಿ ಹೀಗಳೆಯುತ್ತಾನೆ. ಸಿಟ್ಟುಗೊಂಡ ವಿದುರ ಅಪ್ರತಿಮವಾದ ತನ್ನ ಬಿಲ್ಲನ್ನು ಮುರಿದು ಯುದ್ಧದಿಂದ ವಿಮುಖನಾಗುತ್ತಾನೆ. ಸಂಧಿ ವಿಫಲಗೊಳ್ಳುತ್ತದೆ. ಯುದ್ಧವೇ ಸಿದ್ಧ ಎಂಬ ತೀರ್ಮಾನಕ್ಕೆ ಬರಲಾಗುತ್ತದೆ. ಕೌರವನ ಸೇನೆಯಲ್ಲಿ ಪಾಂಡವರನ್ನು ಕೊಲ್ಲಬಲ್ಲ ಇನ್ನೋರ್ವ ಬಲಶಾಲಿ ಕರ್ಣನಿಂದ ಪಾಂಡವರನ್ನು ರಕ್ಷಿಸಬೇಕೆಂದು ನಿರ್ಧರಿಸಿದ ಕೃಷ್ಣ ಅದಕ್ಕಾಗಿ ವೇದಿಕೆ ಸಿದ್ಧಪಡಿಸುತ್ತಾನೆ. ಆ ಸಂದರ್ಭವೇ ಪ್ರಕೃತ ಪಾಠಭಾಗ.

## ಪದ್ಯದ ಸಾರಾಂಶ ವಿವರಣೆ

ವಚನ : ಇಂಬುಕೆಯ್ವೆಯಪ್ಪೊಡೆ ಪಾಂಡವರನೊಡಂಬಡಿಸಿ ಸಂಧಿಯಂ ಮಾಡಿ ಪೂರ್ವಕ್ರಮದೊಳ್ ನಡೆವಂತು ಮಾಟ್ಪೆಂ ಇನ್ನುಮವರೆಮ್ಮಂದುದಂ ಇಂಬುಕೆಯ್ಯದವರ್ ಮೀಱೆವರಲ್ಲ ನೀನುಮೆಮ್ಮ ಪೇೞ್ದುದಂ ಮೀಱದೆ ನೆಗೞಲ್ವೇೞ್ಕುಮೆನೆ ಸುಯೋಧನಂ ಮುಗುಳ್ನಗೆ ನಕ್ಕು–

**ಬಿಡಿಸಿ ಓದು** :

ವಚನ : ಇಂಬುಕೆಯ್ವೆ + ಅಪ್ಪೊಡೆ ಪಾಂಡವರನ್ + ಒಡಂಬಡಿಸಿ ಸಂಧಿಯಂ + ಮಾಡಿ ಪೂರ್ವಕ್ರಮದೊಳ್ ನಡೆವ + ಅಂತು + ಮಾಟ್ಪೆಂ ಇನ್ನುಮಂ + ಅವರ್ + ಎಮ್ಮ + ಅಂದುದಂ ಇಂಬುಕೆಯ್ವುದೆ + ಅವರ್ ಮೀಱುವರಲ್ಲ ನೀನುಮ್ + ಎಮ್ಮ + ಪೇೞ್ವುದಂ + ಮೀಱದೆ ನೆಗೞಲ್+ ವೇೞ್ಕುಂ + ಎನೆ ಸುಯೋಧನಂ ಮುಗುಳ್ನಗೆ ನಕ್ಕು –

**ಪದಗಳ ಅರ್ಥ**

ಇಂಬುಕೆಯ್ವೆ–ಒಪ್ಪಿಕೊಳ್ಳಲು, ಸಮ್ಮತಿ ಸೂಚಿಸಲು; ಒಡಂಬಡಿಸಿ–ಒಪ್ಪಿಸಿ; ಸಂಧಿ – ಒಪ್ಪಂದ; ಪೂರ್ವಕ್ರಮದೊಳ್ – ಹಿಂದಿನಂತೆಯೇ, ಮೊದಲಿನಂತೆಯೇ ; ನಡೆವಂತೆ – ನಡೆದುಕೊಳ್ಳುವ ಹಾಗೆ ; ಮಾೞ್ಪೆಂ – ಮಾಡುವೆನು ; ಎಮ್ಮಂದುದ – ನಾನು ಹೇಳಿದ್ದನ್ನು ; ನೆಗೞಲ್ವೇೞ್ಕುಂ – ನಡೆದುಕೊಳ್ಳಬೇಕು ; ಸುಯೋಧನ – ದುರ್ಯೋಧನ.

**ಸಾರಾಂಶ :** ದುರ್ಯೋಧನನ ಅಜ್ಜನಾದ ಭೀಷ್ಮಾಚಾರ್ಯರು ಹೀಗೆ ಹೇಳುತ್ತಾರೆ. ದುರ್ಯೋಧನ ನಾನು ಹೇಳುವ ಮಾತನ್ನು ಒಪ್ಪುವೆಯಾದರೆ ಪಾಂಡವರನ್ನು ಒಪ್ಪಿಸಿ, ಸಂಧಿಯನ್ನು ಮಾಡಿಸಿ ಮೊದಲಿನಂತೆಯೇ ನಡೆದುಕೊಳ್ಳುವ ಹಾಗೆ ಮಾಡುವೆನು. ಈಗಲಾದರೂ ಅವರು ನಾನು ಹೇಳುವುದನ್ನು ಒಪ್ಪಿಕೊಳ್ಳದೆ ಮೀರುವವರಲ್ಲ. ನೀನು ನಾನು ಹೇಳುವುದುನ್ನು ಮೀರದೆ ನಡೆದುಕೊಳ್ಳಬೇಕು ಎಂದಾಗ ದುರ್ಯೋಧನನು ಮುಗುಳ್ನಕ್ಕು



॥1॥

Uuu u | u – u | - - |
ನಿಮಗೆಪೊ | ಡೆಮಟ್ಟು | ಪೋಪೀ। |

U u – | - - | UUUU | - - | UU -
ಸಮಕ | ಟ್ಟಿಂ ಬಂ | ದೆನಹಿಗ್ಗಿ | ರೊಳ್ಸಂ | ಧಿಯನೇಂ ॥

UU U U | U – U | - UU
ಸಮಕೊಳಿ | ಸಲೆಂದು | ಬಂದೆನೆ।

UU U U | UU- | U - U | - UU | - -
ಸಮರದೊ | ಳೆನಗ | ಜ್ಜ ಪೇಟೆ | ಮಾವುದು | ಕಜ್ಜಂ ॥

ಛಂದಸ್ಸು : ಕಂದ ಪದ್ಯ

**ಬಿಡಿಸಿ ಓದು :**

ನಿಮಗೆ ಪೊಡೆಮಟ್ಟು ಪೋಪ + ಈ ಸಮಕಟ್ಟಿಂ ಬಂದೆನ್ + ಅಹಿತರೊಳ್ ಸಂಧಿಯನ್ + ಏಂ ಸಮಕೊಳಿಸಲ್ + ಎಂದು + ಬಂದೆನೆ ಸಮರದೊಳ್ + ಎನಗೆ +ಅಜ್ಜ ಪೇಟಿಮ್ + ಆವುದು + ಕಜ್ಜಂ.

**ಪದಗಳ ಅರ್ಥ**

ಪೊಡೆಮಟ್ಟು – ನಮಸ್ಕರಿಸಿ ; ಅಹಿತರೊಳ್ – ಶತ್ರುಗಳಲ್ಲಿ(ಪಾಂಡವರಲ್ಲಿ); ಸಮಕಟ್ಟ – ನಿಶ್ಚಯಿಸಿ(ನಿರ್ಧರಿಸಿ); ಸಮಕೊಳಿಸು – ಒಪ್ಪಂದವನ್ನು ಏರ್ಪಡಿಸು ; ಸಮರದೊಳ್ – ಯುದ್ಧ ಭೂಮಿಯಲ್ಲಿ ; ಪೇಟೆ – ಹೇಳಿ ; ಕಜ್ಜಂ – ಕಾರ್ಯ, ಕೆಲಸ.

**ಸಾರಾಂಶ** : ದುರ್ಯೋಧನನು ಭೀಷ್ಮಾಚಾರ್ಯರಿಗೆ ;ಅಜ್ಜಾ ನಾನು ನಿಮಗೆ ನಮಸ್ಕರಿಸಿ ಹೋಗಬೇಕೆಂದು ನಿಶ್ಚಯಿಸಿ ಬಂದೆನೆವರೆತು ಶತ್ರುಗಳಲ್ಲಿ (ಪಾಂಡವರಲ್ಲಿ) ಸಂಧಿಯನ್ನು ಏರ್ಪಡಿಸಲೆಂದೇನು ಬಂದೆನೆ ? ಅಜ್ಜಾ ಯುದ್ಧದಲ್ಲಿ ನಾನು ಮಾಡಬೇಕಾದ ಕಾರ್ಯ ಯಾವುದು ಹೇಳಿರಿ ಎಂದು ಹೇಳುತ್ತಾನೆ.



॥2॥

Uuuu | u - u | uuuu
ನೆಲಕಿಜೆ | ವೆನೆಂದು | ಬಗೆದಿರೆ।

Uuuu | - - | u u u u | - uu | uu -
ಚಲಕಿಜ ಿ | ವೆಂ ಪಾಂ | ಡುಸುತರೊ | ಳೀನೆ | ಲನಿದು ಪಾ॥

U u u u | u u u u | u u -
ಟ್ನೆಲನೆನ | ಗೆ ದಿನಪ | ಸುತನಂ।

U u uu | u uu u | u - u | u u - | u u -
ಕೊಲಿಸಿದ | ನೆಲನೊಡ | ನೆಮತ್ತೆ | ಪುದುವಾ | ಟ್ಟಿಪೆನೇ॥

ಛಂದಸ್ಸು : ಕಂದ ಪದ್ಯ

**ಬಿಡಿಸಿ ಓದು :**

ನೆಲಕೆ + ಇಜೆವೆನ್ + ಎಂದು ಬಗೆದಿರೆ ಚಲಕೆ + ಇಜೆವೆಂ ಪಾಂಡುಸುತರೊಳ್ + ಈ + ನೆಲನ್ + ಇದು ಪಾಟ್ + ನೆಲನ್ + ಎನಗೆ ದಿನಪಸುತನಂ ಕೊಲಿಸಿದ ನೆಲನೊಡನೆ ; ಮತ್ತೆ ಪುದುವಾಳ್ದಪನೇ?

**ಪದಗಳ ಅರ್ಥ**

ಇಱಿವೆ – ಹೋರಾಡುವೆ ; ಪಾಂಡುಸುತರೋಳ್ – ಪಾಂಡುವಿನ ಮಕ್ಕಳಲ್ಲಿ ; ಪಾಳ್ನೆಲ – ಪಾಳು ಬಿದ್ದಿರುವ ನೆಲ ; ದಿನಪಸುತ – ಕರ್ಣ ; ಪುದುವಾಳ್ದಪೆನೆ? – ಕೂಡಿ ಬಾಳುವುದುಂಟೆ?

**ಸಾರಾಂಶ** :ಮುಂದುವರಿದು ದುರ್ಯೋಧನನು ಭೀಷ್ಮರಿಗೆ ;ಅಜ್ಜಾ ಈ ಭೂಮಿಗಾಗಿ(ರಾಜ್ಯಕ್ಕಾಗಿ) ಹೋರಾಡುವೆನೆಂದು ಭಾವಿಸಿದಿರಾ ? ಇಲ್ಲ ಅಜ್ಜಾ ಇಲ್ಲ. ಛಲಕ್ಕಾಗಿಯೇ ಪಾಂಡುವಿನ ಮಕ್ಕಳಲ್ಲಿ ಹೋರಾಡುತ್ತೇನೆ. ಈ ನೆಲ(ಭೂಮಿ) ನನಗೆ ಹಾಳು ಬಿದ್ದಿರುವ ನೆಲ. ದಿನಪಸುತನಾದ ಆ ಕರ್ಣನನ್ನು ಕೊಲ್ಲಿಸಿದ ಈ ನೆಲದೊಡನೆ ಮತ್ತೆ ನಾನು ಕೂಡಿ ಬಾಳುವುದುಂಟೆ ?



॥3॥

-u u |- u –| u u u |– u u |– uu| - - - | u -
ಎನ್ನಣು|ಗಾಳನೆ|ನ್ನಣುಗ |ದಮ್ಮನ|ನಿಕ್ಕಿದ|ಪಾರ್ಥಭೀ|ಮರು।

-u u |- u-| u u u |-u u|- u u| –u - |u -
ಳ್ಳನ್ನೆಗ|ಮೊಲ್ಲೆನೆ|ನ್ನೊಡಲೊ|ಳೆನ್ನಸು|ವುಳ್ಳಿನ|ಮಜ್ಜಸಂ|ಧಿಯಂ॥

- u u| - u u| u u u |- u u |–u u| -u - |u -
ಮುನ್ನಮ|ವಂದಿರಿ|ರ್ಬರುಮ|ನಿಕ್ಕುವೆ|ನಿಕ್ಕಿ ಬ|ಳಿಕ್ಕೆ ಸಂ|ಧಿಗೆ।

-u - |- u -| u u u |-u u |- u u |- u - |u -
ಯ್ವೊನ್ನೆಗ|ಟ್ಟಿಂತಕಾ|ತ್ಮಜನೊ|ಳೆನ್ನಟಿ|ಲಾಜಿದೊ|ಡಾಗದೆಂ|ಬೆನೇ॥

**ಛಂದಸ್ಸು : ಉತ್ಪಲಮಾಲಾ ವೃತ್ತ**

**ಬಿಡಿಸಿ ಓದು :**

ಎನ್ನ + ಅಣುಗಾಳನ್ + ಎನ್ನ + ಅಣುಗ + ತಮ್ಮನನ್ + ಇಕ್ಕಿದ ಪಾರ್ಥಭೀಮರ್ ಉಳ್ಳ + ಅನ್ನೆಗಂ + ಒಲ್ಲೆನ್ + ಎನ್ನ + ಒಡ ಲೊಳ್ + ಎನ್ನ + ಅಸು + ಉಳ್ಳಿನಮ್ + ಅಜ್ಜ ಸಂಧಿಯಂ + ಮುನ್ನಮ್ + ಅವಂದಿರ್ + ಇರ್ಬರುಮನ್ + ಇಕ್ಕುವೆನ್ + ಇಕ್ಕಿ ಬಳಿಕ್ಕೆ ಸಂಧಿ + ಗೆಯ್ವೊನ್ + ನೆಗಟ್ಟ ಅಂತಕಾತ್ಮಜನೊಳ್ + ಎನ್ನ + ಅಟಿಲ್ + ಆಜಿದೊಡೆ + ಆಗದು + ಎಂಬೆನೇ?

**ಪದಗಳ ಅರ್ಥ**

ಅಣುಗಾಳ್ – ಪ್ರಿಯ ಗೆಳೆಯ, (ಕರ್ಣ) ಅಣುಗದಮ್ಮ – ಪ್ರಿಯತಮ್ಮ(ದುಶ್ಯಾಸನ); ಪಾರ್ಥ – ಅರ್ಜುನ ; ಅಸು – ಪ್ರಾಣ ; ಉಳ್– ಇರು ; ಇರ್ಬರು – ಇಬ್ಬರು ; ಇಕ್ಕಿ – ಕೊಂದು; ಬಟಿಕ್ಕೆ – ಆಮೇಲೆ; ಅಂತಕಾತ್ಮಜ – ಅಂತಕ+ಆತ್ಮಜ– ಯಮನ ಮಗ (ಯುಧಿಷ್ಠಿರ–ಧರ್ಮರಾಯ) ; ಅಟಿಲ್ – ದುಃಖ.

**ಸಾರಾಂಶ** : ಮುಂದುವರಿದು ದುರ್ಯೋಧನನು ಭೀಷ್ಮರಿಗೆ ; ಅಜ್ಜಾ ನನ್ನ ಪ್ರೀತಿಯ ಗೆಳೆಯ ಕರ್ಣನನ್ನು , ನನ್ನ ಪ್ರೀತಿಯ ತಮ್ಮ ದುಶ್ಯಾಸನನನ್ನು ಕೊಂದ ಆ ಅರ್ಜುನ–ಭೀಮರು ಜೀವಂತವಾಗಿರುವವರೆಗೆ , ನನ್ನ ದೇಹದಲ್ಲಿ ಪ್ರಾಣವಿರುವವರೆಗೆ, ನಾನು ಸಂಧಿಗೆ ಒಪ್ಪಲಾರೆನು. ಮೊದಲು ಆ ಇಬ್ಬರನ್ನು ಕೊಲ್ಲುವೆನು. ಕೊಂದಮೇಲೆ ಪ್ರಸಿದ್ಧನಾದ, ಅಂತಕಾತ್ಮಜನಾದ ಧರ್ಮರಾಯನೊಡನೆ ಸಂಧಿ ಮಾಡಿಕೊಳ್ಳುತ್ತೇನೆ. ನನ್ನ ದುಃಖ ಆರಿದ ಮೇಲೆ ಅದು ಬೇಡವೆನ್ನುವೆನೆ

॥4॥

-uu | - u u | - u u
ಪುಟ್ಟಿದ | ನೂರ್ವರು | ಮೆನ್ನೊಡ।

-uu | - u u | u - u | - u u | - -
ವುಟ್ಟಿದ | ನೂರ್ವರು | ಮಿದಿರ್ಚಿ | ಸತ್ತೊಡೆ | ಕೋಪಂ॥

- u u | - u u | - -
ಪುಟ್ಟಿ ಪೊ | ದಟ್ಟುದು | ಸತ್ತರ್

-uu | - u u | u u uu | u u u u | u u -
ಪುಟ್ಟರೆ | ಪಾಂಡವ | ರೊಳಿಱಿದು | ಛಲಮನೆ | ಮೆಱೆವೆಂ ॥



**ಛಂದಸ್ಸು : ಕಂದ ಪದ್ಯ**

**ಬಿಡಿಸಿ ಓದು :**

ಪುಟ್ಟಿದ + ನೂರ್ವರುಂ + ಒಡವುಟ್ಟಿದನೂರ್ವರುಮ್ + ಇದಿರ್ಚಿ+ ಸತ್ತೊಡೆ +ಕೋಪಂಪುಟ್ಟಿ+ ಪೊದಟ್ಟುದು +ಸತ್ತರ್ಪುಟ್ಟರೆ ಪಾಂಡವರೊಳ್ + ಇರಿದು ಛಲಮನೆ ಮೆರೆವೆಂ.

**ಪದಗಳ ಅರ್ಥ**

ಪುಟ್ಟಿದ – ಹುಟ್ಟಿದ ; ಒಡವುಟ್ಟಿದ – ಜೊತೆಯಲ್ಲಿ ಹುಟ್ಟಿದ ; ನೂರ್ವರು – ನೂರು ಜನರು ; ಇದಿರ್ಚಿ – ಹೋರಾಡಿ ; ಸತ್ತರ್ ಪುಟ್ಟರೆ – ಸತ್ತರೆ ಮತ್ತೆ ಹುಟ್ಟುವುದಿಲ್ಲವೆ ? ಛಲಮನೆ ಮೆರೆವೆಂ – ಚಲವನ್ನೇ ಮೆರೆಯುವೆ, ಸಾಧಿಸುವೆ.

**ಸಾರಾಂಶ** : ಮುಂದುವರಿದು ದುರ್ಯೋಧನನು ಭೀಷ್ಮರಿಗೆ ;ಹುಟ್ಟಿದ ಎನ್ನ ನೂರು ಮಕ್ಕಳು, ಎನ್ನ ಒಡ ಹುಟ್ಟಿದ ನೂರು ಸಹೋದರರು ಹೋರಾಡಿ ಸತ್ತರು.ಆದ್ದರಿಂದ ಕೋಪ ಹುಟ್ಟಿ ಅಧಿಕವಾಯಿತು.ಸತ್ತವರು ಮತ್ತೆ ಹುಟ್ಟುತ್ತಾರೆಯೇ? ಪಾಂಡವರೊಡನೆ ಹೋರಾಡಿ ಛಲವನ್ನೆ ಮೆರೆಯುತ್ತೇನೆ.(ಸಾಧಿಸುವೆನು) ಎಂದು ದುರ್ಯೋಧನನು ಹೇಳುತ್ತಾನೆ.

॥5॥

-u u | u-u | - u u
ಕಾದದಿ | ರೆನಜ್ಜ | ಪಾಂಡವ।

- - | - - | u - u | uu u u | - -
ರಾದರ್ | ಮೇಣಿಂ | ದಿನೊಂದೆ | ಸಮರದೊ | ಳಾಂ ಮೇ॥

- uu | u -u | – uu
ಣಾದೆನ | ದಱಿಂದೆ | ಪಾಂಡವ

–u u | - - | u - u | - uu | uu -
ರ್ಗಾದುದು | ಮೇಣಾ | ಯ್ತು ಕೌ ರ | ವಂಗವ | ನಿತಳಂ॥

**ಛಂದಸ್ಸು : ಕಂದ ಪದ್ಯ**

**ಬಿಡಿಸಿ ಓದು :**

ಕಾದದೆ + ಇರೆನ್ + ಅಜ್ಜ ಪಾಂಡವರ್ + ಆದರ್ ಮೇಣ್ + ಇಂದಿನ + ಒಂದೆ ಸಮರದೊಳ್ + ಆಂ ಮೇಣ್ + ಆದೆನ್ + ಅದಱಿಂದೆ ಪಾಂಡವರ್ಗೆ + ಆದುದು ಮೇಣ್ + ಆಯ್ತು ಕೌರವಂಗೆ + ಅವನಿತಳಂ.

## ಅಭ್ಯಾಸ ಪ್ರಶ್ನೋತ್ತರಗಳು

**ಅ) ಕೊಟ್ಟಿರುವ ಪ್ರಶ್ನೆಗಳಿಗೆ ಒಂದೊಂದು ವಾಕ್ಯಗಳಲ್ಲಿ ಉತ್ತರಿಸಿ.**

**1. ನಿಮಗೆ ನಮಸ್ಕರಿಸಿ ಹೋಗಲು ಬಂದೆನಷ್ಟೇ ಎಂದು ದುರ್ಯೋಧನ ಯಾರಿಗೆ ಹೇಳುವನು?**
ನಿಮಗೆ ನಮಸ್ಕರಿಸಿ ಹೋಗಲು ಬಂದೆನಷ್ಟೇ ಎಂದು ದುರ್ಯೋಧನ ಭೀಷ್ಮರಿಗೆ ಹೇಳುವನು.

**2. ದಿನಪಸುತ ಎಂದರೆ ಯಾರು?**
ದಿನಪಸುತ ಎಂದರೆ ಕರ್ಣ.

**3. ಯಾರಿಬ್ಬರನ್ನು ಕೊಂದ ಬಳಿಕ ಸಂಧಿ ಮಾಡಿಕೊಳ್ಳುವುದಾಗಿ ದುರ್ಯೋಧನ ಹೇಳುತ್ತಾನೆ?**

ಪಾರ್ಥ–ಭೀಮರನ್ನು ಕೊಂದ ಬಳಿಕ ಸಂಧಿ ಮಾಡಿಕೊಳ್ಳುವುದಾಗಿ ದುರ್ಯೋಧನ ಹೇಳುತ್ತಾನೆ.

**4. ಛಲವನ್ನೇ ಮೆರೆಯುವುದಾಗಿ ನಿರ್ಧರಿಸಿದವನು ಯಾರು?**
ಛಲವನ್ನೇ ಮೆರೆಯುವುದಾಗಿ ನಿರ್ಧರಿಸಿದವನು ದುರ್ಯೋಧನ.

**5. ಅಂತಕಾತ್ಮಜ ಎಂದರೆ ಯಾರು?**

ಅಂತಕಾತ್ಮಜ ಎಂದರೆ ಧರ್ಮರಾಯ (ಯುಧಿಷ್ಠಿರ)

## ಹೆಚ್ಚುವರಿ ಪ್ರಶ್ನೋತ್ತರಗಳು

6.ಪಾಂಡವರನ್ನು ಸಂಧಿಗೆ ಒಪ್ಪಿಸುತ್ತೇನೆ ಎಂದು ದುರ್ಯೋಧನನಿಗೆ ಹೇಳಿದವರು ಯಾರು ?

**ಪಾಂಡವರನ್ನು ಸಂಧಿಗೆ ಒಪ್ಪಿಸುತ್ತೇನೆ ಎಂದು ದುರ್ಯೋಧನನಿಗೆ ಹೇಳಿದವರು ಭೀಷ್ಮಾಚಾರ್ಯರು.**

## ಆ) ಕೊಟ್ಟಿರುವ ಪ್ರಶ್ನೆಗಳಿಗೆ ಎರಡು–ಮೂರು ವಾಕ್ಯಗಳಲ್ಲಿ ಉತ್ತರಿಸಿ.

**1. ತಾನು ಹೋರಾಡುತ್ತಿರುವುದು ನೆಲಕ್ಕಲ್ಲ ಛಲಕ್ಕೆ ಎಂಬುದನ್ನು ದುರ್ಯೋಧನ ಹೇಗೆ ವಿವರಿಸುತ್ತಾನೆ?**
ದುರ್ಯೋಧನನು ಅಜ್ಜ ಭೀಷ್ಮರಿಗೆ " ಅಜ್ಜಾ ಈ ನೆಲಕ್ಕಾಗಿ ಹೋರಾಡುವೆನೆಂದು ಭಾವಿಸಿದಿರಾ ? ಇಲ್ಲ. ಛಲಕ್ಕಾಗಿಯೇ ಪಾಂಡುವಿನ ಮಕ್ಕಳಲ್ಲಿ ಹೋರಾಡುತ್ತೇನೆ. ಪ್ರೀತಿಯ ಗೆಳೆಯ ಕರ್ಣ ,ಪ್ರೀತಿಯ ತಮ್ಮ ದುಶ್ಯಾಸನ, ಎನ್ನ ನೂರು ಮಕ್ಕಳನ್ನು ಕೊಲ್ಲಿಸಿದ ಈ ನೆಲ ನನಗೆ ಹಾಳು ಬಿದ್ದಿರುವ ನೆಲ. ಸತ್ತವರು ಮತ್ತೆ ಹುಟ್ಟಿಬರುವುದಿಲ್ಲ ಆದ್ದರಿಂದ ನಾನು ಛಲಕ್ಕಾಗಿ ಹೋರಾಡುತ್ತಿರುವುದು" ಎಂದು ವಿವರಿಸುತ್ತಾನೆ.

**2. ಈ ನೆಲದೊಡನೆ ತಾನು ಸಹಬಾಳ್ವೆ ಮಾಡುವುದಿಲ್ಲವೆಂದು ದುರ್ಯೋಧನ ಹೇಳುವುದೇಕೆ?**
ದುರ್ಯೋಧನ "ಛಲಕ್ಕೊಸ್ಕರ ಹೋರಾಡುತ್ತೇನೆಯೇ ವರತು ನೆಲಕ್ಕಾಗಿ ಅಲ್ಲ. ನನ್ನ ಪ್ರೀತಿಯ ಗೆಳೆಯ ಕರ್ಣ , ಪ್ರೀತಿಯ ತಮ್ಮ ದುಶ್ಯಾಸನ ಮೊದಲಾದ ಒಡವುಟ್ಟಿದವರನ್ನು, ಎನ್ನ ಮಕ್ಕಳನ್ನು ಕೊಲ್ಲಿಸಿದ ಈ ನೆಲ ನನಗೆ ಹಾಳು ಬಿದ್ದಿರುವ ನೆಲ. ಇಂತಹ ನೆಲದೊಡನೆ ಮತ್ತೆ ನಾನು ಸಹಬಾಳ್ವೆ ಮಾಡಲು ಸಾಧ್ಯವಿಲ್ಲ"ಎಂದು ಹೇಳುತ್ತಾನೆ.

**3. ಪಾರ್ಥ–ಭೀಮರ ಬಗೆಗೆ ದುರ್ಯೋಧನನ ಅಭಿಪ್ರಾಯವೇನು?**

ತನ್ನ ಪ್ರೀತಿಯ ಗೆಳೆಯ ಕರ್ಣನನ್ನು , ನನ್ನ ಪ್ರೀತಿಯ ತಮ್ಮ ದುಶ್ಯಾಸನನನ್ನು ಕೊಂದವರು ಅರ್ಜುನ–ಭೀಮರು. ಅವರು ಜೀವಂತವಾಗಿರುವವರೆಗೆ ಸಂಧಿಗೆ ಒಪ್ಪಲಾರೆನು. ಮೊದಲು ಆ ಇಬ್ಬರನ್ನು ಕೊಲ್ಲುವೆನು. ಕೊಂದಮೇಲೆ ಪ್ರಸಿದ್ಧನಾದ, ಧರ್ಮರಾಯನೊಡನೆ ಸಂಧಿ ಮಾಡಿಕೊಳ್ಳುತ್ತೇನೆ ಎಂಬ ಅಭಿಪ್ರಾಯ ವ್ಯಕ್ತಪಡಿಸುತ್ತಾನೆ.

## ಇ) ಕೊಟ್ಟಿರುವ ಪ್ರಶ್ನೆಗಳಿಗೆ ಎಂಟು-ಹತ್ತು ವಾಕ್ಯಗಳಲ್ಲಿ ಉತ್ತರಿಸಿ.

**1. ಭೀಷ್ಮ ಮತ್ತು ದುರ್ಯೋಧನರ ನಡುವಿನ ಸಂಭಾಷಣೆಯ ಸ್ವಾರಸ್ಯವನ್ನು ವಿವರಿಸಿ.**
ದುರ್ಯೋಧನನು ತಂದೆ-ತಾಯಿಯರ ಆಪೇಕ್ಷೆಯಂತೆ ಶರಶಯ್ಯೆಯಲ್ಲಿ ಮಲಗಿದ್ದ ಭೀಷ್ಮರ ಸಲಹೆ ಪಡೆಯಲು ರಣರಂಗಕ್ಕೆ ಬರುತ್ತಾನೆ. ಆಗ ಭೀಷ್ಮರು "ದುರ್ಯೋಧನ ನಾನು ಹೇಳುವ ಮಾತನ್ನು ಒಪ್ಪುವೆಯಾದರೆ ಪಾಂಡವರನ್ನು ಒಪ್ಪಿಸಿ, ಸಂಧಿಯನ್ನು ಮಾಡಿಸಿ ಮೊದಲಿನಂತೆಯೇ ನಡೆದುಕೊಳ್ಳುವ ಹಾಗೆ ಮಾಡುವೆನು. ಈಗಲಾದರೂ ಅವರು ನಾನು ಹೇಳುವುದನ್ನು ಒಪ್ಪಿಕೊಳ್ಳದೆ ಮೀರುವವರಲ್ಲ. ನೀನು ನಾನು ಹೇಳುವುದುನ್ನು ಮೀರದೆ ನಡೆದುಕೊಳ್ಳಬೇಕು ಎಂದು ಸಂಧಿಗೆ ಒಪ್ಪಿಸಲು ಪ್ರಯತ್ನಿಸುತ್ತಾರೆ.
ಆಗ ದುರ್ಯೋಧನನು
ಅಜ್ಜಾ, ನಿಮಗೆ ನಮಸ್ಕರಿಸಿ ಹೋಗಲೆಂದು ಬಂದನೇ ಹೊರತು ಶತ್ರುಗಳೊಡನೆ ಒಪ್ಪಂದವನ್ನು ಏರ್ಪಡಿಸುವುದಕ್ಕೆಂದು ಬಂದಿಲ್ಲ. ಮುಂದೆ ನಡೆಯುವ ಯುದ್ಧದಲ್ಲಿ ನಾನೇನು ಮಾಡಬಹುದೆಂಬುದನ್ನು ಹೇಳಿರಿ.ಈ ಭೂಮಿಗಾಗಿ ಯುದ್ಧ ಮಾಡುವುದಿಲ್ಲ ಛಲಕ್ಕಾಗಿ ಪಾಂಡವರೊಡನೆ ಹೋರಾಡುವೆನು. ಈ ಭೂಮಿ ನನಗೆ ಪಾಳುಬಿದ್ದ ನೆಲ. ಕರ್ಣನನ್ನು ಕೊಲ್ಲಿಸಿದ ನೆಲನೊಡನೆ ಮತ್ತೆ ಬಾಳಲು ಸಾಧ್ಯವಿಲ್ಲ.ಗೆಳೆಯ ಕರ್ಣ,ನನ್ನ ತಮ್ಮ ದುಶ್ಯಾಸನರನ್ನು ಕೊಂದ ಆ ಪಾರ್ಥ-ಭೀಮರನ್ನು ಕೊಲ್ಲುವವರೆಗೆ ಸಂಧಿಗೆ ಒಪ್ಪುವುದಿಲ್ಲ.ನನ್ನ ಮಕ್ಕಳು, ಒಡ ಹುಟ್ಟಿದ ಸಹೋದರರು ಹೋರಾಡಿ ಸತ್ತರು. ಆದ್ದರಿಂದ ನನ್ನಲ್ಲಿ ಕೋಪ ಹುಟ್ಟಿ ಅಧಿಕವಾಯಿತು.ಪಾಂಡವರೊಡನೆ ಹೋರಾಡಿ ನನ್ನ ಛಲವನ್ನೇ ಮೆರೆಯುತ್ತೇನೆ.ನಾನು ಹೋರಾಡದೆ ಬಿಡುವುದಿಲ್ಲ, ಇಂದಿನ ಯುದ್ಧದಲ್ಲಿ ಪಾಂಡವರು ಉಳಿಯಬೇಕು ಇಲ್ಲವೆ ಈ ನೆಲ ಕೌರವನದಾಗಬೇಕು ಎಂದು ದುರ್ಯೋಧನ ತನ್ನ ಛಲವನ್ನು ತೋರ್ಪಡಿಸುತ್ತಾನೆ.
**2. ದುರ್ಯೋಧನನ ಛಲದ ಗುಣ ಅವನ ಮಾತುಗಳಲ್ಲಿ ವ್ಯಕ್ತವಾಗಿರುವ ಬಗೆಯನ್ನು ವಿವರಿಸಿ.**

**"ಛಲದೊಳ್ ದುರ್ಯೋಧನಂ"** ಎನ್ನುವ ಹಾಗೆ ಛಲವನ್ನೆ ಮುಖ್ಯ ಗುಣವುಳ್ಳವನು ದುರ್ಯೋಧನ. ಭೀಷ್ಮರ ಎದುರಿನಲ್ಲಿಯೇ ಸಂಧಿಗೆ ಒಪ್ಪದೆ ಯುದ್ಧ ಮಾಡಿಯೇತೀರಬೇಕೆಂಬ ಅವನ **ಛಲದ ಗುಣ** ಅವನ ಸ್ವಭಾವಕ್ಕೆ ತಕ್ಕನಾಗಿ ವ್ಯಕ್ತಗೊಂಡಿರುವುದನ್ನು **'ಛಲಮನೆ ಮೆಱೆವೆಂ'** ಎಂಬ ಪದ್ಯದಲ್ಲಿ ನಿರೂಪಿತವಾಗಿದೆ. ಭೀಷ್ಮರು ಪಾಂಡವರನ್ನು ಒಪ್ಪಿಸುತ್ತೇನೆ, ಸಂಧಿ ಮಾಡಿಕೋ ಎಂದು ಹೇಳುತ್ತಾರೆ. ಆಗ ದುರ್ಯೋಧನನು ಒಪ್ಪದೆ ಛಲದ ಮಾತುಗಳನ್ನು ಹೀಗೆ ಹೇಳುತ್ತಾನೆ. "ನೆಲಕ್ಕಿರಿವೆನೆಂದು ಬಗೆದಿರೆ ಛಲಕ್ಕಿರಿವೆಂ" ಛಲಕ್ಕಾಗಿ ಪಾಂಡವರೊಡನೆ ಹೋರಾಡುವೆನು. ಕರ್ಣನನ್ನು ಕೊಲ್ಲಿಸಿದ ಈ ನೆಲ ನನಗೆ ಪಾಳುಬಿದ್ದ ನೆಲ. ಇಂತಹ ನೆಲನೊಡನೆ ಮತ್ತೆ ಬಾಳುವುದಿಲ್ಲ. ಪ್ರೀತಿಯ ಗೆಳೆಯ ಕರ್ಣ, ನನ್ನ ತಮ್ಮ ದುಶ್ಯಾಸನರನ್ನು ಕೊಂದ ಆ ಪಾರ್ಥ-ಭೀಮರನ್ನು ಇನ್ನು ಜೀವಂತವಾಗಿದ್ದಾರೆ ಅವರನ್ನು ಕೊಲ್ಲವುದೆ ನನ್ನ ಛಲವಾಗಿದೆ. ನನ್ನ ಮಕ್ಕಳು, ಒಡ ಹುಟ್ಟಿದ ಸಹೋದರರು ಹೋರಾಡಿ ಸತ್ತರು. ಆದ್ದರಿಂದ ನನ್ನಲ್ಲಿ ಕೋಪ ಹುಟ್ಟ ಅಧಿಕವಾಯಿತು. ಪಾಂಡವರೊಡನೆ ಹೋರಾಡಿ ನನ್ನ ಛಲವನ್ನೇ ಮೆರೆಯುತ್ತೇನೆ. ನಾನು ಹೋರಾಡದೆ ಬಿಡುವುದಿಲ್ಲ, ಇಂದಿನ ಯುದ್ಧದಲ್ಲಿ ಪಾಂಡವರು ಉಳಿಯಬೇಕು ಇಲ್ಲವೆ ಈ ನೆಲ ಕೌರವನದಾಗಬೇಕು ಎಂಬ ಛಲದಿಂದ ಯುದ್ಧದ ನಿರ್ಧಾರವನ್ನು ಕೈಗೊಂಡು ಛಲವನ್ನೇ ಸಾಧಿಸುತ್ತಾನೆ ಎಂಬ ದುರ್ಯೋಧನನ ಮಾತುಗಳಲ್ಲಿ ಛಲದ ಗುಣ ಅಭಿವ್ಯಕ್ತವಾಗಿದೆ ಎಂದು ವಿವರಿಸಬಹುದು.

## ಈ) ಸಂದರ್ಭಸಹಿತ ಸ್ವಾರಸ್ಯವನ್ನು ವಿವರಿಸಿ.

**1. "ನೆಲಕಿಱಿವೆನೆಂದು ಬಗೆದಿರೆ ಚಲಕಿಱಿವೆಂ"**
**ಆಯ್ಕೆ :** ಈ ವಾಕ್ಯವನ್ನು ಮಹಾಕವಿ **ರನ್ನ** ವಿರಚಿತ**"ಸಾಹಸ ಭೀಮ ವಿಜಯ"**ಎಂಬ ಕೃತಿಯಿಂದ ಆಯ್ದ **'ಛಲಮನೆ ಮೆಱೆವೆಂ'**ಎಂಬ ಪದ್ಯದಿಂದ ಆರಿಸಿಕೊಳ್ಳಲಾಗಿದೆ.
**ಸಂದರ್ಭ :** ಈ ಮಾತನ್ನು ದುರ್ಯೋಧನನು ಭೀಷ್ಮರಿಗೆ ಹೇಳುತ್ತಾನೆ. ಶರಶಯ್ಯೆಯಲ್ಲಿ ಮಲಗಿದ್ದ ಭೀಷ್ಮರು ದುರ್ಯೋಧನನಿಗೆ ಪಾಂಡವರೊಡನೆ ಸಂಧಿ ಮಾಡಿಕೊಳ್ಳುವ ಸಲಹೆ ನೀಡುತ್ತಾರೆ. ಆದರೆದುರ್ಯೋಧನನು "ಅಜ್ಜಾ, ನಿಮಗೆ ನಮಸ್ಕರಿಸಿ ಹೋಗಲೆಂದು ಬಂದೆನು. ನಾನು ಈ ನೆಲಕ್ಕಾಗಿ ಯುದ್ಧ ಮಾಡುವೆನೆಂದು ಭಾವಿಸಿರುವಿರಾ? ನಾನು ಛಲಕ್ಕಾಗಿ ಪಾಂಡವರೊಡನೆ ಹೋರಾಡುವೆನು. ಈ ಭೂಮಿ ನನಗೆ ಪಾಳುಬಿದ್ದ ನೆಲಕ್ಕೆ ಸಮ""ಎಂದು ಹೇಳಿದ ಸಂದರ್ಭವಾಗಿದೆ.
**ಸ್ವಾರಸ್ಯ :** ಈ ಮಾತಿನಲ್ಲಿ ದುರ್ಯೋಧನನ ನೆಲದ ಮೇಲಿನ ವ್ಯಾಮೋಹಕ್ಕಿಂತ ಛಲದ ಗುಣ ಪ್ರತಿಪಾದಿತವಾಗಿರುವುದು ಸ್ವಾರಸ್ಯಪೂರ್ಣವಾಗಿ ಮೂಡಿಬಂದಿದೆ.

**2. "ಸಮರದೊಳೆನಗಜ್ಜ ಪೇಟಿಮಾವುದು ಕಜ್ಜಂ."**
**ಆಯ್ಕೆ :** ಈ ವಾಕ್ಯವನ್ನು ಮಹಾಕವಿ **ರನ್ನ** ವಿರಚಿತ**"ಸಾಹಸ ಭೀಮ ವಿಜಯ"**ಎಂಬ ಕೃತಿಯಿಂದ ಆಯ್ದ **'ಛಲಮನೆ ಮೆಱೆವೆಂ'**ಎಂಬ ಪದ್ಯದಿಂದ ಆರಿಸಿಕೊಳ್ಳಲಾಗಿದೆ.
**ಸಂದರ್ಭ :** ಈ ಮಾತನ್ನು ದುರ್ಯೋಧನನು ಭೀಷ್ಮರಿಗೆ ಹೇಳುತ್ತಾನೆ. ಶರಶಯ್ಯೆಯಲ್ಲಿ ಮಲಗಿದ್ದ ಭೀಷ್ಮರು ದುರ್ಯೋಧನನಿಗೆ

ಪಾಂಡವರೊಡನೆ ಸಂಧಿ ಮಾಡಿಕೊಳ್ಳುವ ಸಲಹೆ ನೀಡುತ್ತಾರೆ. ಆದರೆದುರ್ಯೋಧನನು "ಅಜ್ಜಾ, ನಿಮಗೆ ನಮಸ್ಕರಿಸಿ ಹೋಗಲೆಂದು ಬಂದೆನೆವರತು ಶತ್ರುಗಳಲ್ಲಿ ಸಂಧಿಯನ್ನು ಏರ್ಪಡಿಸಬೇಕಂದಲ್ಲ. ಯುದ್ಧದಲ್ಲಿ ಎನಗೆ ಮುಂದಿನ ಕಾರ್ಯ ಯಾವುದೆಂದು ಹೇಳಿರಿ ಎಂದು ಕೇಳಿದ ಸಂದರ್ಭವಾಗಿದೆ.

**ಸ್ವಾರಸ್ಯ** :ಈ ವಾಕ್ಯದಲ್ಲಿ ಮುಂದೆ ನಡೆಯುವ ಯುದ್ಧದಲ್ಲಿ ಯಾವ ರೀತಿ ಹೋರಾಡಬೇಕೆಂಬ ಸಲಹೆ, ಕಾರ್ಯವನ್ನು ಕೇಳುವುದು ದುರ್ಯೋಧನನ ವೀರತನ ಸ್ವಾರಸ್ಯಪೂರ್ಣವಾಗಿ ಅಭಿವ್ಯಕ್ತಗೊಂಡಿದೆ.

**3. "ಪಾಂಡವರೊಳಿಜಿದು ಛಲಮನೆ ಮೆರೆವೆಂ."**

**ಆಯ್ಕೆ** : ಈ ವಾಕ್ಯವನ್ನು ಮಹಾಕವಿ **ರನ್ನ** ವಿರಚಿತ**"ಸಾಹಸ ಭೀಮ ವಿಜಯ"**ಎಂಬ ಕೃತಿಯಿಂದ ಆಯ್ದ **'ಛಲಮನೆ ಮೆಱೆವೆಂ'**ಎಂಬ ಪದ್ಯದಿಂದ ಆರಿಸಿಕೊಳ್ಳಲಾಗಿದೆ.

**ಸಂದರ್ಭ** : ಈ ಮಾತನ್ನು ದುರ್ಯೋಧನನು ಭೀಷ್ಮರಿಗೆ ಹೇಳುತ್ತಾನೆ. ಶರಶಯ್ಯೆಯಲ್ಲಿ ಮಲಗಿದ್ದ ಭೀಷ್ಮರು ದುರ್ಯೋಧನನಿಗೆ ಪಾಂಡವರೊಡನೆ ಸಂಧಿ ಮಾಡಿಕೊಳ್ಳುವ ಸಲಹೆ ನೀಡಿದಾಗ ಅಜ್ಜಾ ಹುಟ್ಟಿದ ಎನ್ನ ನೂರು ಮಕ್ಕಳು, ಎನ್ನ ಒಡ ಹುಟ್ಟಿದ ನೂರು ಸಹೋದರರು ಹೋರಾಡಿ ಸತ್ತರು.ಆದ್ದರಿಂದ ಕೋಪ ಹುಟ್ಟಿ ಅಧಿಕವಾಯಿತು.ಸತ್ತವರು ಮತ್ತೆ ಹುಟ್ಟುತ್ತಾರೆಯೇ ? ಪಾಂಡವರೊಡನೆ ಹೋರಾಡಿ ಛಲವನ್ನೆ ಮೆರೆಯುತ್ತೇನೆ ಎಂದು ಹೇಳಿದ ಸಂದರ್ಭವಾಗಿದೆ.

**ಸ್ವಾರಸ್ಯ** : ಈ ವಾಕ್ಯದಲ್ಲಿ ದುರ್ಯೋಧನನು ಪಾಂಡವರೊಡನೆ ಹೋರಾಡಿ ಛಲವನ್ನೆ ಸಾಧಿಸುವೆ ಎಂಬ ಮಹತ್ವಾಂಕ್ಷೆಯ ಛಲದ ಗುಣ ಸ್ವಾರಸ್ಯಪೂರ್ಣವಾಗಿ ಮೂಡಿಬಂದಿದೆ.

**4. "ಮೇಣಾಯ್ತು ಕೌರವಂಗವನಿತಳಂ."**

**ಆಯ್ಕೆ** : ಈ ವಾಕ್ಯವನ್ನು ಮಹಾಕವಿ **ರನ್ನ** ವಿರಚಿತ**"ಸಾಹಸ ಭೀಮ ವಿಜಯ"**ಎಂಬ ಕೃತಿಯಿಂದ ಆಯ್ದ **'ಛಲಮನೆ ಮೆಱೆವೆಂ'**ಎಂಬ ಪದ್ಯದಿಂದ ಆರಿಸಿಕೊಳ್ಳಲಾಗಿದೆ.

**ಸಂದರ್ಭ** : ಈ ಮಾತನ್ನು ದುರ್ಯೋಧನನು ಭೀಷ್ಮರಿಗೆ ಹೇಳುತ್ತಾನೆ. ಭೀಷ್ಮರ ಸಂಧಿಯ ಸಲಹೆಯನ್ನು ಒಪ್ಪದ ದುರ್ಯೋಧನ ಅಜ್ಜ ನಾನು ಪಾಂಡವರೊಡನೆ ಹೋರಾಡದೆ ಇರಲಾರೆನು. ಇಂದಿನ ಒಂದು ಯುದ್ಧದಲ್ಲಿ ಪಾಂಡವರು ಉಳಿಯಬೇಕು ಅಥವಾ ನಾನು ಉಳಿಯಬೇಕು. ಅದರಿಂದ ಈ ಭೂಮಿಯ ತಳ(ಒಡೆತನ) ಪಾಂಡವರಿಗೆ ಹೋಗಬೇಕು ಇಲ್ಲವೆ ಕೌರವನಿಗೆ ಉಳಿಯಬೇಕು ಎಂದು ಹೇಳಿದ ಸಂದರ್ಭವಾಗಿದೆ.

**ಸ್ವಾರಸ್ಯ** : ಈ ವಾಕ್ಯವು ದುರ್ಯೋಧನ **ಮಾಡು ಇಲ್ಲವೆ ಮಡಿ** ಎಂಬ ಛಲದ ಗುಣ-ಯುದ್ಧೋತ್ಸಹದ ಶಕ್ತಿಯನ್ನು ಸ್ವಾರಸ್ಯಪೂರ್ಣವಾಗಿ ಅರ್ಥೈಸಿದೆ.

## ಉ) ಬಿಟ್ಟ ಜಾಗಗಳನ್ನು ಸೂಕ್ತ ಪದಗಳಿಂದ ತುಂಬಿರಿ.

೧.'ರಾಜೀವಸಖ' ಎಂದರೆ **ಸೂರ್ಯ** ಎಂದು ಅರ್ಥ.
೨. ಗದುಗಿನ ಭಾರತವು **ಭಾಮಿನಿ** ಷಟ್ಪದಿಯಲ್ಲಿ ರಚಿತವಾಗಿದೆ.
೩. ಅಶ್ವಿನಿ ದೇವತೆಗಳ ವರಬಲದಿಂದ **ನಕುಲ ಸಹದೇವರು** ಜನಿಸಿದರು.
೪. ಕರ್ಣನು **ಸೂರ್ಯನ** ಅನುಗ್ರಹದಿಂದ ಜನಿಸಿದನು.
೫. ಗದುಗಿನ ಸಮೀಪದ **ಕೋಳಿವಾಡ** ಕುಮಾರವ್ಯಾಸನು ಹುಟ್ಟಿದ ಸ್ಥಳ.

## ಭಾಷಾ ಚಟುವಟಿಕೆ

**ಭಾಷಾ ಚಟುವಟಿಕೆ**

**ಅ. ಕೊಟ್ಟಿರುವ ಪದ್ಯದ ಸಾಲುಗಳಿಗೆ ಪ್ರಸ್ತಾರ ಹಾಕಿ, ಗಣ ವಿಭಾಗ ಮಾಡಿ, ಛಂದಸ್ಸಿನ ಹೆಸರನ್ನು ಬರೆಯಿರಿ.**

1. ಪುಟ್ಟಿದ ನೂರ್ವರುಮೆನ್ನೊಡ

ವುಟ್ಟಿದ ನೂರ್ವರುಮಿದಿರ್ಚಿ ಸತ್ತೊಡೆ ಕೋಪಂ

4 4 4 =12

| | | |
|---|---|---|
| –U U<br>ಪುಟ್ಟಿದ | –U U<br>ನೂರ್ವರು | –U U<br>ಮೆನ್ನೊಡ |

| 4 | 4 | 4 | 4 | 4 | =20 |
|---|---|---|---|---|---|
| –U U | –U U | U – U | –U U | –– | |
| ವುಟ್ಟಿದ | ನೂರ್ವರು | ಮಿದಿರ್ಚ | ಸತ್ತೊಡೆ | ಕೋಪಂ | |

**ಛಂದಸ್ಸು– ಕಂದ ಪದ್ಯ**

**ಲಕ್ಷಣ:** ಈ ಪದ್ಯದ ಮೊದಲ ಸಾಲಿನಲ್ಲಿ 4 ಮಾತ್ರೆಯ 3 ಗಣಗಳು ಮತ್ತು ಎರಡನೆಯ ಸಾಲಿನಲ್ಲಿ 4 ಮಾತ್ರೆಯ 5 ಗಣಗಳು ಬಂದಿದ್ದು ಕಂದಪದ್ಯದ ಪೂರ್ವಾರ್ಧದ ಲಕ್ಷಣವನ್ನು ಹೊಂದಿದೆ ಆದ್ದರಿಂದ ಇದು ಕಂದಪದ್ಯವಾಗಿದೆ.

2. ಎನ್ನಣುಗಾಳನೆನ್ನಣುಗದಮ್ಮನನಿಕ್ಕಿದ ಪಾರ್ಥಭೀಮರು

ಳೃನ್ನೆಮ್

| ಭ | ರ | ನ | ಭ | ಭ | ರ | ಲ ಗ |
|---|---|---|---|---|---|---|
| – UU | –U – | U U U | – U U | –UU | – U – | U – |
| ಎನ್ನಣು | ಗಾಳನೆ | ನ್ನಣುಗ | ದಮ್ಮನ | ನಿಕ್ಕಿದ | ಪಾರ್ಥಭೀ | ಮರು |

**ಛಂದಸ್ಸು– ಉತ್ಪಲ ಮಾಲಾ ವೃತ್ತ**

**ಲಕ್ಷಣ:** ಈ ಪಾದದಲ್ಲಿ 20 ಅಕ್ಷರಗಳು/28 ಮಾತ್ರೆಗಳು/ಭರನಭಭರಲಗ ಗಣಗಳು ಹಾಗೂ ನಾಗವರ್ಮನ ಪ್ರಕಾರ ಪಾದದ ಆದಿಯಲ್ಲಿ ಒಂದು ಗುರುಬಂದಿದೆ ಆದ್ದರಿಂದ ಉತ್ಪಲ ಮಾಲಾ ವೃತ್ತದ ಲಕ್ಷಣವನ್ನು ಹೊಂದಿದೆ ಆದ್ದರಿಂದ ಇದು ಉತ್ಪಲ ಮಾಲಾ ವೃತ್ತ ಛಂದಸ್ಸಾಗಿದೆ.

**ಆ. ಕೊಟ್ಟಿರುವ ಪದಗಳಿಗೆ ತತ್ಸಮ– ತದ್ಭವಗಳನ್ನು ಬರೆಯಿರಿ.**

ಕಜ್ಜ, ಅಜ್ಜ, ಕಜ್ಜ–ಕಾರ್ಯ , ಅಜ್ಜ–ಆರ್ಯ

**ಇ. ಕೊಟ್ಟಿರುವ ಪದಗಳನ್ನು ವಿಗ್ರಹವಾಕ್ಯ ಮಾಡಿ ಸಮಾಸದ ಹೆಸರನ್ನು ತಿಳಿಸಿ.**

**ಪಾರ್ಥಭೀಮರು** = ಪಾರ್ಥನು + ಭೀಮನು –**ದ್ವಂದ್ವಸಮಾಸ**

**ಅಂತಕಾತ್ಮಜ** = ಅಂತಕನ ಆತ್ಮಜನಾವನೋ ಅವನು ಅಂತಕಾತ್ಮಜ –ಯುಧಿಷ್ಠಿರ– **ಬಹುವ್ರೀಹಿ ಸಮಾಸ**

**ದಿನಪಸುತ** = ದಿನಪನ ಸುತನಾವನೋ ಅವನು ದಿನಪಸುತ – ಕರ್ಣ– **ಬಹುವ್ರೀಹಿ ಸಮಾಸ**

## ಚಟುವಟಿಕೆ

**1. ಕೊಟ್ಟಿರುವ ಪದ್ಯ ಭಾಗವನ್ನು ಪೂರ್ಣಗೊಳಿಸಿ ಕಂಠಪಾಠ ಮಾಡಿರಿ**

| | |
|---|---|
| ನೆಲಕಿಱಿವೆನೆಂದು ಬಗೆದಿರೆ।<br>ಚಲಕಿಱಿವೆಂ ಪಾಂಡುಸುತರೊಳೀನೆಲನಿದು ಪಾ॥<br>ಟಿಕ್ಸಿಲನೆನಗೆ ದಿನಪಸುತನಂ।<br>ಕೊಲಿಸಿದ ನೆಲನೊಡನೆ ಮತ್ತೆ ಪುದುವಾಟ್ಟಪೆನೇ॥ | ಪುಟ್ಟಿದ ನೂರ್ವರುಮೆನ್ನೊಡ।<br>ವುಟ್ಟಿದ ನೂರ್ವರುಮಿದಿರ್ಚಿ ಸತ್ತೊಡೆ ಕೋಪಂ॥<br>ಪುಟ್ಟಿ ಪೊದಟ್ಟುದು ಸತ್ತರ್<br>ಪುಟ್ಟರೆ ಪಾಂಡವರೊಳಿಱಿದು ಛಲಮನೆ ಮೆಱೆವೆಂ ॥ |